ಹೊಸ ಪಶುವೈದ್ಯ ಆಸ್ಪತ್ರೆಗಳ ಮಂಜೂರಾತಿ

೧೭೩೮. ಶ್ರೀ ಬಿ. ಎಸ್. ಯಡಿಯೂರಪ್ಪ (ಶಿಕಾರಿಪುರ).—ಮಾನ್ಯ ಗ್ರಾಮೀಣಾಭಿವೃದ್ಧಿ ಪಂಚಾಯತ್ ರಾಜ್ ಹಾಗೂ ವಕ್ಫ್ ಮತ್ತು ಪಶುಸಂಗೋಪನ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಅ) ರಾಜ್ಯದಲ್ಲಿ ೧೯೮೫-೮೬ನೇ ಸಾಲಿನಿಂದ ೧೯೮೭-೮೮ನೇ ಸಾಲಿನವರೆಗೆ ಪ್ರತಿ ವರ್ಷ ಮಂಜೂರಾಗಿರುವ ಹೊಸ ಪಶುವೈದ್ಯ ಆಸ್ಪತ್ರೆಗಳ ಸಂಖ್ಯೆ ಎಷ್ಟು ?

ಆ) ೧೯೮೮-೮೯ನೇ ಸಾಲಿನಲ್ಲಿ ರಾಜ್ಯದಲ್ಲಿ ಹೊಸದಾಗಿ ಪ್ರಾರಂಭಿಸಬೇಕೆಂದಿರುವ ಪಶುವೈದ ಆಸ್ಪತ್ರೆಗಳ ಸಂಖ್ಯೆ ಎಷ್ಟು ?

ಶ್ರೀ ಅಬ್ದುಲ್ ನಜೀರ್ ಸಾಬ್ (ಪಶುಸಂಗೋಪನ, ಮತ್ತು ಪಶುವೈದ್ಯ ಸೇವೆಗಳು ಹಾಗೂ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಚಿವರು).—

ಅ) ಯಾವುದೂ ಇಲ್ಲ

ಆ) ರಾಜ್ಯದಲ್ಲಿ ಹೊಸದಾಗಿ ಪಶುವೈದ್ಯ ಶಾಲೆಗಳನ್ನು ಪ್ರಾರಂಭಿಸುವ ವಿಷಯವು ಜಿಲ್ಲಾ ಪರಿಷತ್ತುಗಳ ಕಾರ್ಯ ವ್ಯಾಪ್ತಿಗೆ ಬರುವುದರಿಂದ ೧೯೮೮-೮೯ನೇ ಸಾಲಿನಲ್ಲಿ ಪ್ರಾರಂಭಿಸಬೇಕೆಂದಿರುವ ಪಶುವೈದ್ಯ ಆಸ್ಪತ್ರೆಗಳ ಸಂಖ್ಯೆಯನ್ನು ಆಯಾ ಜಿಲ್ಲಾ ಪರಿಷತ್ತುಗಳೇ ನಿರ್ಧರಿಸಬೇಕಾಗುತ್ತದೆ. ಈ ವರೆವಿಗೆ ಬಂದಿರುವ ಆರು ಜಿಲ್ಲಾ ಪರಿಷತ್ತುಗಳ ಮಾಹಿತಿಯಂತೆ ೪೦ಗ್ರಾಮೀಣ ಪಶುವೈದ್ಯ ಶಾಲೆಗಳನ್ನು ಸ್ಥಾಪಿಸಲು ಹಾಗೂ ೧೦ ಗ್ರಾಮೀಣ ಪಶುವೈದ್ಯ ಶಾಲೆಗಳನ್ನು ಉನ್ನತೀಕರಿಸಲು ಅವು ಉದ್ದೇಶ ಹೊಂದಿವೆ.

ಶ್ರೀ ಆರ್.ವೆಂಕಟರಾಮಯ್ಯ (ಶ್ರೀ ಬಿ. ಎಸ್. ಯಡಿಯೂರಪ್ಪನವರ ಪರವಾಗಿ) .—ಮಾನ್ಯ ಅಧ್ಯಕ್ಷರೇ, ೮೫-೮೬, ೮೬-೮೭ ಮತ್ತು ೮೭-೮೮ನೇ ಸಾಲುಗಳಿಂದ ಒಂದು ಪಶುವೈದ್ಯಶಾಲೆಯನ್ನೂ ಸ್ಥಾಪನೆ ಮಾಡಲಿಲ್ಲವೆಂದು ಒಪ್ಪಿಕೊಳ್ಳುತ್ತಾರೆ. ಗ್ರಾಮೀಣ ಪ್ರದೇಶಗಳಲ್ಲಿ ಮುಖ್ಯವಾಗಿ ಕುರಿ ಮತ್ತು ಪಶುಗಳಿಗೆ ವಿಪರೀತ ರೋಗ ಬಂದು ಸಾಯುತ್ತಿವೆ. ಆದ್ದರಿಂದ ತಾಲ್ಲೂಕಿಗೊಂದರಂತೆ ಆಸ್ಪತ್ರೆ ತೆರೆಯುವ ಪ್ರಯತ್ನ ಮಾಡುತ್ತಾರೆಯೇ ? ಎರಡನೆಯದಾಗಿ ಜಿಲ್ಲಾ ಪರಿಷತ್ತುಗಳಿಗೆ ಅಧಿಕಾರ ಕೊಟ್ಟಿದ್ದೇವೆ ಎಂದು ಮತ್ತು ೬ ಜಿಲ್ಲೆಗಳಿಂದ ಪ್ರಪೋಸಲ್ಸ್ ಬಂದಿದೆ ಎಂದು ಇವರು ಹೇಳುತ್ತಾರೆ. ನಾವು ಜಿಲ್ಲಾ ಪರಿಷತ್ತುಗಳನ್ನು ಕೇಳಿದರೆ ದುಡ್ಡಿಲ್ಲ ಎನ್ನುತ್ತಾರೆ. ಆದ್ದರಿಂದ ಇವರು ಜಿಲ್ಲಾ ಪರಿಷತ್ತುಗಳಿಗೆ ಡೈರೆಕ್ಷನ್ಸ್ ಕೊಡುತ್ತಾರೆಯೇ ?

ಶ್ರೀ ಎ. ಲಕ್ಷ್ಮೀಸಾಗರ್.—ನಾವು ಪ್ರಯತ್ನ ಮಾಡಿಲ್ಲ ಎನ್ನುವುದು ವಾಸ್ತವಿಕ ಪರಿಸ್ಥಿತಿಗೆ ವಿರುದ್ಧವಾಗಿದೆ ಸರ್ಕಾರದವರು ಹಾಕಿಕೊಟ್ಟಿರುವ ನಾರ್ಮ್ಸ್ ಪ್ರಕಾರ ೭೫೦ ಜೀವರಾಶಿಗಳಿರಬೇಕು ಅಂಥಾ ಕಡೆ ಒಂದು ಆಸ್ಪತ್ರೆ ತೆರೆಯಬಹುದಾಗಿದೆ. ಅದೇ ರೀತಿ ಈಗಾಗಲೇ ೧೨೫೬ ಆಸ್ಪತ್ರೆಗಳಿವೆ. ಅವುಗಳ ಪೈಕಿ ೭೭೫ಕ್ಕೆ ಸಂಬಂಧಪಟ್ಟಂತೆ ನಿಮ್ಮ ಪ್ರಶ್ನೆ ಇರುವುದು. ೮೬-೮೭ ಮತ್ತು ೮೭-೮೮ ಸಾಲುಗಳಲ್ಲಿ ಏಕೆ ಮಾಡಲಿಲ್ಲ ಎಂದು ಕೇಳಿದ್ದಾರೆ. ನಿಮಗೆ ನೆನಪಿರಬಹುದು. ಈ ಜಿಲ್ಲಾಪರಿಷತ್ತುಗಳು ಮಂಡಲ ಪಂಚಾಯ್ತಿಗಳು ಬರಬೇಕಾದಂಥ ಪರಿಸ್ಥಿತಿಯಲ್ಲಿ ಅವುಗಳ ಕಾರ್ಯವ್ಯಾಪ್ತಿ ಎಷ್ಟಿರಬೇಕು, ಯಾವ್ಯಾವುದು ಅವುಗಳ ಪರಿಮಿತಿಯಲ್ಲಿ ಬರಬೇಕು ಎಂಬುದನ್ನು ತೀರ್ಮಾನ ಮಾಡುವುದರಲ್ಲಿ ವಿಳಂಬವಾಗಿದ್ದು ನಿಜ, ಆದ್ದರಿಂದ ಅವುಗಳನ್ನು ಈ ವೇಳೆಗಾಗಲೇ ಮಾಡಲಾಗಲಿಲ್ಲ.

(ಸನ್ಮಾನ್ಯ ಅಧ್ಯಕ್ಷರು ಪೀಠದಲ್ಲಿದ್ದರು)

ಎರಡನೆಯದು, ಹೆಚ್ಚಿಗೆ ಹಣ ನೀಡಬೇಕು ಎಂದಿದ್ದಾರೆ ಯಾವ ಯಾವ ಬಾಬುಗಳಿಗೆ ಎಷ್ಟೆಷ್ಟು ಹಣ ಮಂಜೂರಾತಿ ನೀಡಬೇಕು ಎಂಬುದನ್ನು ತೀರ್ಮಾನಿಸುವ ಅಧಿಕಾರ ಜಿಲ್ಲಾಪರಿಷತ್ತುಗಳಿಗೆ ಕೊಡಲ್ಪಟ್ಟಿದೆ. ಆದ್ದರಿಂದ ಇದು ಸರ್ಕಾರದ ವ್ಯಾಪ್ತಿಯಲ್ಲಿ ಬರದ ವಿಚಾರವಾಗಿದೆ.

ಶ್ರೀ ಆರ್. ವೆಂಕಟರಾಮಯ್ಯ.—ಇನ್ನೂ ೭೭ಕಡೆ ಪಶುವೈದ್ಯ ಶಾಲೆಗಳನ್ನು ಸ್ಥಾಪನೆ ಮಾಡಬೇಕೆಂದು ಅವರೇ ಒಪ್ಪಿಕೊಳ್ಳುತ್ತಾರೆ. ಹಾಗೆಯೇ ಈ ವರ್ಷ ೭೦ ಮಾತ್ರ ಮಾಡಲಾಗುವುದೆಂದೂ

ಹೇಳುತ್ತಾರೆ, ಅಲ್ಲಿಗೆ ಇವನ್ನೆಲ್ಲಾ ಪೂರೈಸುವುದಕ್ಕೆ ಇನ್ನೂ ಎಷ್ಟು ವರ್ಷ ಬೇಕಾಗುತ್ತದೆ? ಹಳ್ಳಿಗಾಡಿನ ರೈತರ ಬಗ್ಗೆ ಸಹಾನುಭೂತಿಯಿಂದ ವರ್ತಿಸಬೇಕೆಂದು ಕೋರುತ್ತೇನೆ.

ಶ್ರೀ ಎ. ಲಕ್ಷ್ಮೀಸಾಗರ್.—ಈ ಆಸ್ಪತ್ರೆಗಳನ್ನು ಸ್ಥಾಪಿಸುವ ಅಂತಿಮ ಪೂರ್ಣಾವಧಿ ಅಧಿಕಾರ ಜಿಲ್ಲಾ ಪರಿಷತ್ತುಗಳಿಗಿರುತ್ತದೆ. ಆದ್ದರಿಂದ ಅವುಗಳಿಂದ ಸನ್ಮಾನ್ಯ ಸದಸ್ಯರು ವಿವರಣಾತ್ಮಕವಾದ ಉತ್ತರವನ್ನು ಪಡೆದುಕೊಳ್ಳಬಹುದು.

ಶ್ರೀ ಮಲ್ಲಿಕಾರ್ಜುನ ಎಂ. ಖರ್ಗೆ.—ಜಿಲ್ಲಾ ಪರಿಷತ್ತುಗಳಿಗೆ ಹೆಚ್ಚಿನ ಹಣವನ್ನು ನೀವು ಬಿಡುಗಡೆ ಮಾಡಿದರೆ ಮಾತ್ರ ಅವರು ಪಶುವೈದ್ಯಶಾಲೆಗಳನ್ನು ಸ್ಥಾಪನೆ ಮಾಡಲು ಸಾಧ್ಯವಾಗುತ್ತದೆ.

ಹತ್ತು ಲಕ್ಷ ರೂಪಾಯಿ ಕೊಟ್ಟು ನೂರು ಆಸ್ಪತ್ರೆಗಳನ್ನು ತೆಗೆಯಬೇಕೆಂದು ಹೇಳಿದರೆ ಹೇಗೆ ? ಆಗುತ್ತದೆ. ನಮ್ಮ ರಾಜ್ಯದಲ್ಲಿ ಹೆಚ್ಚೂ ಕಡಿಮೆ ೧,೭೫,೦೦೦.೦೦ ಜಾನುವಾರುಗಳು ಇವೆ, ಅದರ ಲೆಕ್ಕ ಹಾಕಿಕೊಂಡು ೭೭೫ ಪಶುವೈದ್ಯಶಾಲೆಗಳನ್ನು ತೆರೆಯಬೇಕೆಂದು ಹೇಳಿದ್ದೀರಿ. ನಿಮ್ಮ ಲೆಕ್ಕದ ಪ್ರಕಾರ ೮೦೦ ಪಶುವೈದ್ಯ ಶಾಲೆಗಳು ಬೇಕಾಗುತ್ತದೆ. ಇಷ್ಟು ಆಸ್ಪತ್ರೆಗಳನ್ನು ತೆಗೆಯಬೇಕಾದರೆ ಎಷ್ಟು ವರ್ಷವಾಗುತ್ತದೆ. ಮನುಷ್ಯರಿಗೆ ಬೇಕಾದ ಆಸ್ಪತ್ರೆಗಳನ್ನು ಸಹ ತೆರೆಯುವುದಿಲ್ಲ ಹಾಗೂ ದನಗಳಿಗೆ ಬೇಕಾದಂತಹ ಆಸ್ಪತ್ರೆಗಳನ್ನು ಕೂಡ ನೀವು ತೆಗೆಯುವುದಿಲ್ಲ.

ಶ್ರೀ. ಎ. ಲಕ್ಷ್ಮೀಸಾಗರ್.— ಪಶುವೈದ್ಯ ಶಾಲೆಗಳ ಬಗ್ಗೆ ನೀವು ಹೇಳಿ, ಬೇರೆ ವಿಚಾರಕ್ಕೆ ಕೈ ಹಾಕುವುದು ಬೇಡ. ನಾನು ಉತ್ತರ ಹೇಳುವುದನ್ನು ಕೇಳಬೇಕು. ೧೯೮೩ನೇ ವರ್ಷದ ಅಂಕಿ ಸಂಖ್ಯೆಯ ಪ್ರಕಾರ ೨,೬೧,೪೮೫ ಜಾನುವಾರುಗಳು ನಮ್ಮ ರಾಜ್ಯದಲ್ಲಿವೆ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ.— ನಾನು ಹೇಳಿದ್ದಕ್ಕಿಂತಲೂ ಒಂದು ಕೋಟಿ ಹೆಚ್ಚಿಗೆ ಇದೆ, ಎಲ್ಲಕ್ಕಿಂತ ಧಾರವಾಡ ಜಿಲ್ಲೆಯಲ್ಲಿ ಹೆಚ್ಚು ಜಾನುವಾರುಗಳು ಇವೆ. ಒಂದು ಡೆಫನೆಟ್ ಪ್ರೋಗ್ರಾಂ ಹಾಕಿ ಪ್ರತಿ ವರ್ಷ ಹತ್ತು ಇಲ್ಲವೇ ೮ಆಸ್ಪತ್ರೆಗಳನ್ನಾದರೂ ಪ್ರಾರಂಭ ಮಾಡಿದರೆ ಎಂಟತ್ತು ವರ್ಷಗಳಲ್ಲಿ ಪೂರ್ತಿ ಆಸ್ಪತ್ರೆಗಳನ್ನು ತೆರೆಯುವುದಕ್ಕೆ ಅನುಕೂಲವಾಗುತ್ತದೆ ಈ ಬಗ್ಗೆ ಮಾಸ್ಟರ್ ಪ್ಲಾನ್ ಮಾಡಿ. ಪ್ರತಿ ವರ್ಷ ಇಷ್ಟಿಷ್ಟು ಆಸ್ಪತ್ರೆಗಳನ್ನು ತೆರೆದು ಈ ಸಮಸ್ಯೆಯನ್ನು ಬಗೆಹರಿಸುತ್ತೇವೆಂದು ಹೇಳಿ. ನೀವು ಜಿಲ್ಲಾ ಪರಿಷತ್ತನ್ನು ತೋರಿಸಿದರೆ ಅವರು ಸರಕಾರದಿಂದ ಹಣ ಬಂದಿಲ್ಲ. ಮಾಡುವುದಕ್ಕಾಗುವುದಿಲ್ಲವೆಂದು ಹೇಳುತ್ತಾರೆ.

ಶ್ರೀ ಎ. ಲಕ್ಷ್ಮೀಸಾಗರ್.— ಮಾನ್ಯ ಖರ್ಗೆಯವರಿಗೆ ಪೂರ್ಣ ವಿಚಾರ ಗೊತ್ತಿದೆ. ಈ ಒಂದೇ ವರ್ಷದಲ್ಲಿ ಇಲ್ಲವೇ ಎರಡು ಮೂರು ವರ್ಷಗಳಲ್ಲಿ ೭೭೫ ದನದ ಆಸ್ಪತ್ರೆಗಳನ್ನು ತೆರೆಯುವುದಕ್ಕಾಗುವುದಿಲ್ಲ. ಆದ್ಯತೆಯ ಮೇಲೆ ಅವಶ್ಯಕತೆಯ ಮೇಲೆ ಬೇಕಾಗಿರುವಷ್ಟಂತಹ ಆಸ್ಪತ್ರೆಗಳನ್ನು ತೆರೆಯುತ್ತೇವೆ. ಯಾವ್ಯಾವ ಜಿಲ್ಲೆಯಲ್ಲಿ ಎಷ್ಟೆಷ್ಟು ದನದ ಆಸ್ಪತ್ರೆಗಳು ಬೇಕು ಎನ್ನುವ ನಿರ್ಣಯಾತ್ಮಕ ತೀರ್ಮಾನವನ್ನು ತೆಗೆದುಕೊಳ್ಳುವಷ್ಟಕ್ಕಂತಹ ಅಧಿಕಾರವನ್ನು ಆಯಾಯ ಜಿಲ್ಲಾಪರಿಷತ್ತುಗಳಿಗೆ ಕೊಟ್ಟಿದ್ದೇವೆ. ಇದು ಮೊದಲನೇ ಉತ್ತರ ಜಿಲ್ಲಾ ಪರಿಷತ್ತುಗಳ ಪೂರ್ಣ ವಿಚಾರವನ್ನು ತಿಳಿದುಕೊಂಡು ಅವರಿಗೆ ವಾರ್ಷಿಕ ಹಣವನ್ನು ಸರಕಾರದವರು ಬಿಡುಗಡೆ ಮಾಡುತ್ತಾರೆ. ಅವರ ಅವಶ್ಯಕತೆಗಳನ್ನು ಅನುಸರಿಸಿ ಜಾನುವಾರುಗಳಿಗೆ ಸಂಬಂಧಪಟ್ಟಂತೆ ಅದಕ್ಕೆ ಹೆಚ್ಚು ಹಣವನ್ನು ಖರ್ಚು ಮಾಡುವುದಕ್ಕೆ ಅವರಿಗೇ ಅಧಿಕಾರವಿದೆ. ಅವರಿಗಿರತಕ್ಕಂತಹ ಸರ್ವತಂತ್ರವಾದ ಅಧಿಕಾರವನ್ನು ಸರಿಯಾಗಿ ಉಪಯೋಗಿಸಿಕೊಳ್ಳುವ ಜಾಣ್ಮೆ ಅವರಲ್ಲಿದೆ. ಕಾನೂನು ಪ್ರಕಾರ ಅವರಿಗೆ ನಿರ್ಣಯಾತ್ಮಕವಾದ ವಿಚಾರದಲ್ಲಿ ನಿರ್ದೇಶನ ಕೊಡಲು ಸರಕಾರ ಅಧಿಕಾರವನ್ನು ಇಟ್ಟುಕೊಂಡಿಲ್ಲ. ಈ ವಿಚಾರವನ್ನು ಮಾನ್ಯ ಖರ್ಗೆಯವರು ಗಮನದಲ್ಲಿಟ್ಟುಕೊಂಡಿದ್ದರೆ ಈ ಪ್ರಶ್ನೆ ಕೇಳಬೇಕಾಗೇ ಇರಲಿಲ್ಲ.